ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪಂರಾ 127 ಜಿಪಸ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:16-03-2021.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

167 4/S

ಇವರಿಗೆ:

ಕಾರ್ಯದರ್ಶಿಗಳು,
ವಿಧಾನಸಭೆ, ವಿಧಾನಸೌಧ,
ಬೆಂಗಳೂರು.

10-03-2021

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಸುಬ್ಬಾರೆಡ್ಡಿ ಎಸ್.ಎನ್.(ಬಾಗೇಪಲ್ಲಿ)ರವರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.1493ಕ್ಕೆ ಉತ್ತರ ಸಲ್ಲಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಸುಬ್ಬಾರೆಡ್ಡಿ ಎಸ್.ಎನ್.(ಬಾಗೇಪಲ್ಲಿ)ರವರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.1493ಕ್ಕೆ ಉತ್ತರದ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ

B. Naveenkumar 16/03/21.
(ಬಿ. ನವೀನ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

16/03/21

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು,
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಅಧೀನ ಕಾರ್ಯದರ್ಶಿ(ಸಮನ್ವಯ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಕರ್ನಾಟಕ ವಿಧಾನ ಸಭೆ

15ನೇ ವಿಧಾನಸಭೆ

9ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1493**
ವಿಧಾನ ಸಭೆಯ ಸದಸ್ಯರ ಹೆಸರು	:	**ಶ್ರೀ ಸುಬ್ಬಾರೆಡ್ಡಿ ಎಸ್.ಎನ್.(ಬಾಗೇಪಲ್ಲಿ)**
ಉತ್ತರಿಸುವ ದಿನಾಂಕ	:	**10-03-2021**
ಉತ್ತರಿಸುವವರು	:	**ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.**

ಕ್ರ. ಸಂ.	ಪ್ರಶ್ನೆಗಳು	ಉತ್ತರ
(ಅ)	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮ ಪಂಚಾಯತಿಗಳಿಗೆ 15ನೇ ಹಣಕಾಸು ಯೋಜನೆಯಲ್ಲಿ ಎಷ್ಟು ಹಣ ಮಂಜೂರು ಮಾಡಲಾಗಿದೆ.	ಅನುಬಂಧದಲ್ಲಿ ಲಗತ್ತಿಸಿದೆ.
(ಆ)	ಈ ಹಣವನ್ನು ಯಾವ ದಿನಾಂಕದಂದು ಗ್ರಾಮ ಪಂಚಾಯತಿಗಳಿಗೆ ಬಿಡಗಡೆ ಮಾಡಲಾಗಿದೆ;	ದಿನಾಂಕ:19-06-2020, 22-07-2020 ಮತ್ತು 03-02-2021 ರಂದು ಗ್ರಾಮ ಪಂಚಾಯತಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆ.
(ಇ)	ಈ ಹಣದಲ್ಲಿ ಪ್ರಸ್ತುತ ಗ್ರಾಮ ಪಂಚಾಯತಿಗಳಲ್ಲಿ ಉಳಿದಿರುವ ಹಣ ಎಷ್ಟು; (ವಿವರ ನೀಡುವುದು)	ಅನುಬಂಧದಲ್ಲಿ ಲಗತ್ತಿಸಿದೆ.
(ಈ)	ಕೆಲವು ಗ್ರಾಮ ಪಂಚಾಯತಿಗಳಲ್ಲಿ ಆಡಳಿತಾಧಿಕಾರಿ ನೇಮಕಗೊಂಡಂದಿನಿಂದ ಅಧ್ಯಕ್ಷರ ಆಯ್ಕೆ ಅವಧಿಯೊಳಗೆ ಹಣ ಬಳಕೆ ಮಾಡಿದ್ದು, ನಿಜವೇ; ಇದ್ದಲ್ಲಿ ಯಾವ ದಿನಾಂಕದಂದು ಎಷ್ಟೆಷ್ಟು ಹಣ ಬಳಕೆ ಮಾಡಲಾಗಿದೆ; (ವಿವರ ನೀಡುವುದು)	ಹೌದು, ದಿನಾಂಕ:30-06-2020 ರಿಂದ 15-02-2021ರವರೆಗೆ ಅನುದಾನ ಬಳಕೆ ಮಾಡಲಾಗಿದೆ. ಅನುಬಂಧದಲ್ಲಿ ಲಗತ್ತಿಸಿದೆ.
(ಉ)	ಈ ಹಣ ಬಳಕೆ ಸಮರ್ಪಕವಾಗಿದೆಯೇ; ಹಾಗಿದ್ದಲ್ಲಿ ಈ ಹಣವನ್ನು ಯಾವ ಯಾವ ಉದ್ದೇಶಗಳಿಗೆ ಬಳಕೆ ಮಾಡಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)	ಗ್ರಾಮ ಪಂಚಾಯತಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಚರಂಡಿ ಸ್ವಚ್ಛತೆ, ನೈರ್ಮಲೀಕರಣ, ಚರಂಡಿ ನಿರ್ಮಾಣ, ರಸ್ತೆ ದುರಸ್ಥಿ, ಬೀದಿದೀಪ, ಘನ ತ್ಯಾಜ್ಯ ವಿಲೇವಾರಿ ಘಟಕಗಳ ನಿರ್ವಹಣೆಗಾಗಿ ಮತ್ತು ಶಾಲೆಗಳ ದುರಸ್ಥಿಗಾಗಿ ಹಣವನ್ನು ಬಳಕೆ ಮಾಡಲಾಗಿರುತ್ತದೆ.

ಸಂಖ್ಯೆ: ಗ್ರಾಅಪಂರಾ 127 ಜಿಪಸ 2021

(ಕೆ.ಎಸ್. ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಅನುಬಂಧ

(ರೂ. ಗಳಲ್ಲಿ)

ಕ್ರ.ಸಂ	ಗ್ರಾಮ ಪಂಚಾಯ್ತಿ ಹೆಸರು	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಉಳಿಕೆ ಅನುದಾನ	ಗ್ರಾಮ ಪಂಚಾಯತಿಗಳಲ್ಲಿ ಆಡಳಿತಾಧಿಕಾರಿ ನೇಮಕಗೊಂಡಂದಿನಿಂದ ಅಧ್ಯಕ್ಷರ ಆಯ್ಕೆ ಅವಧಿಯೊಳಗೆ ಹಣ ಬಳಕೆ ಮಾಡಿರುವ ವಿವರ.
1	ಪಾತಪಾಳ್ಯ	4259009	440000	3819009	440000
2	ಬಿಳ್ಳೂರು	2725500	1110000	1615500	1110000
3	ಚೇಳೂರು	4459312	430000	4029312	430000
4	ದೇವರಗುಡಿಪಲ್ಲಿ	5006388	5018683	-12295	5018683
5	ಘಂಟಂವಾರಪಲ್ಲಿ	4605331	0	4605331	0
6	ಗೂರ್ತಪಲ್ಲಿ	2787487	0	2787487	0
7	ಗೂಳೂರು	2966036	500000	2466036	500000
8	ಸೋಮನಾಥಪುರ	4076309	1520000	2556309	1520000
9	ರಾಚ್ಚೆರುವು	3122195	0	3122195	0
10	ಜೂಲಪಾಳ್ಯ	3154078	730000	2424078	730000
11	ಪಾಳ್ಯಕೆರೆ	3493277	0	3493277	0
12	ಕಾನಗಮಾಕಲಪಲ್ಲಿ	4001941	800000	3201941	800000
13	ನಲ್ಲಪರೆಡ್ಡಿಪಲ್ಲಿ	2729095	700000	2029095	700000
14	ಕೊತ್ತಕೋಟೆ	2908793	1770000	1138793	1770000
15	ಮಾರ್ಗಾನುಕುಂಟೆ	2762610	0	2762610	0
16	ಯಲ್ಲಂಪಲ್ಲಿ	4842570	2060000	2782570	2060000
17	ಮಿಟ್ಟೇಮರಿ	3058371	1200000	1858371	1200000
18	ನಲ್ಲಗುಟ್ಟಪಲ್ಲಿ	3339073	0	3339073	0
19	ನಾರೇಮದ್ದೇಪಲ್ಲಿ	3371375	1040000	2331375	1040000
20	ಪರಗೋಡು	3717832	0	3717832	0
21	ಪುಲಿಗಲ್	3093397	0	3093397	0
22	ಚಾಕವೇಲು	3109922	300000	2809922	300000
23	ತಿಮ್ಮಂಪಲ್ಲಿ	4585812	0	4585812	0
24	ಪೋಲನಾಯ್ಕನಪಲ್ಲಿ	3379055	1480000	1899055	1480000
25	ತೋಳ್ಳಪಲ್ಲಿ	3737829	1290000	2447829	1290000
	ಒಟ್ಟು	**89292597**	**20388683**	**68903914**	**20388683**

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಆಯುಕ್ತರವರ ಕಛೇರಿ, ಗ್ರಾ.ಕುನೀ.&.ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ,
ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009. ☎:080–22240508 📠:22240509
ಇ–ಮೇಲ್: krwssd@gmail.com

ಸಂ:ಗ್ರಾಕುನೀ&ನೈಇ 69 ಗ್ರಾನೀಸ(4)2021 ದಿನಾಂಕ:17.03.2021.

157
ULS
10/3/21

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು–01.

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ **ಶ್ರೀನಿವಾಸಮೂರ್ತಿ ಕೆ. ಡಾ|| (ನೆಲಮಂಗಲ) ಇವರ ಚುಕ್ಕೆ ರಹಿತ ಪ್ರಶ್ನೆ ಸಂ:1675ಕ್ಕೆ** ಸಂಬಂಧಿಸಿದ ಮೇಲಿನ ಕ್ರಮ / ವಾಸ್ತವಿಕ ವರದಿಯ ಉತ್ತರ ನೀಡುವ ಬಗ್ಗೆ.

******

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ **ಶ್ರೀನಿವಾಸಮೂರ್ತಿ ಕೆ. ಡಾ|| (ನೆಲಮಂಗಲ) ಇವರ ಚುಕ್ಕೆ ರಹಿತ ಪ್ರಶ್ನೆ ಸಂ:1675ಕ್ಕೆ** ಸಂಬಂಧಿಸಿದ ಉತ್ತರದ **<u>25</u>** ಪ್ರತಿಗಳನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,
ಕೆ.ವಿ. ವಿಠಲ್ 17-03-2021
ಪತ್ರಾಂಕಿತ ವ್ಯವಸ್ಥಾಪಕರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

ಪ್ರತಿಯನ್ನು:
1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿರವರಿಗೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರಿಗೆ.

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಶ್ರೀನಿವಾಸ ಮೂರ್ತಿ.ಕೆ.ಡಾ॥ (ನೆಲಮಂಗಲ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1675

ಉತ್ತರ ದಿನಾಂಕ : 10.03.2021.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಿಂದ ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಲಾಗಿದೆ; (ಗ್ರಾಮವಾರು ಮಾಹಿತಿ ನೀಡುವುದು)</td><td>2017-18 ರಿಂದ 2019-20 ರವರೆಗೆ ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ನಿರ್ಮಿಸಿರುವ "ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆಗಳ ವಿವರ ಕೆಳಕಂಡಂತಿವೆ.
<table>
<tr><th>ಕ್ರ. ಸಂ</th><th>ತಾಲ್ಲೂಕು</th><th>ವರ್ಷ</th><th>ಘಟಕಗಳ ಸಂಖ್ಯೆ</th></tr>
<tr><td>1</td><td rowspan="3">ನೆಲಮಂಗಲ</td><td>2017-18</td><td>55</td></tr>
<tr><td>2</td><td>2018-19</td><td>0</td></tr>
<tr><td>3</td><td>2019-20</td><td>0</td></tr>
<tr><td></td><td></td><td>ಒಟ್ಟು</td><td>55</td></tr>
</table>
ಗ್ರಾಮವಾರು ವಿವರ ಅನುಬಂಧ-1ರಲ್ಲಿ ಲಗತ್ತಿಸಿದೆ.</td></tr>
<tr><td>ಆ)</td><td>ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಮಂಜೂರು ಮಾಡಲಾದ ಶುದ್ಧ ಕುಡಿಯುವ ನೀರಿನ ಘಟಕಗಳೆಷ್ಟು; (ಗ್ರಾಮವಾರು ಮಾಹಿತಿ ನೀಡುವುದು)</td><td>ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಮಂಜೂರು ಮಾಡಲಾದ ಶುದ್ಧ ಕುಡಿಯುವ ನೀರಿನ ಘಟಕಗಳ ವಿವರಗಳು ಈ ಕೆಳಕಂಡಂತಿವೆ.
<table>
<tr><th>Sl. No</th><th>G.P</th><th>Village</th><th>Implemented By</th><th>No. of Plants Approved</th></tr>
<tr><td>1</td><td>Arishinakunte</td><td>Adarshanagara</td><td>Zilla Panchayath</td><td>1</td></tr>
<tr><td>2</td><td>Arishinakunte</td><td>Vinayakanagara</td><td>Grama Panchayath</td><td>1</td></tr>
<tr><td>3</td><td>Sompura</td><td>Sompura</td><td>Grama Panchayath</td><td>1</td></tr>
<tr><td>4</td><td>Sompura</td><td>Thattekere</td><td>Grama Panchayath</td><td>1</td></tr>
<tr><td>5</td><td>Sompura</td><td>Yedehalli Colony</td><td>Grama Panchayath</td><td>1</td></tr>
<tr><td>6</td><td>Vajarahalli</td><td>Vajarahalli</td><td>Grama Panchayath</td><td>1</td></tr>
<tr><td>7</td><td>Vishweshwarapura</td><td>Islampura</td><td>Grama Panchayath</td><td>1</td></tr>
<tr><td>8</td><td>Yentaganahally</td><td>Hanchipura</td><td>Grama Panchayath</td><td>1</td></tr>
<tr><td>9</td><td>Yentaganahally</td><td>Mahadevapura</td><td>Grama Panchayath</td><td>1</td></tr>
<tr><td></td><td>Total</td><td></td><td></td><td>9</td></tr>
</table></td></tr>
</table>

ಇ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿರುವ ಒಟ್ಟು ಶುದ್ಧ ಕುಡಿಯುವ ನೀರಿನ ಘಟಕಗಳೆಷ್ಟು; (ಗ್ರಾಮವಾರು ಮಾಹಿತಿ ನೀಡುವುದು)

ನೆಲಮಂಗಲ ತಾಲ್ಲೂಕಿನಲ್ಲಿ ಇದುವರೆವಿಗೂ "ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆಗಳ ವಿವರ ಕೆಳಕಂಡಂತಿವೆ.

Taluk	Agency	No. of Plants Approved	Commi ssioned	No. of Plants Working
Nelamangala	Dept Tender	71	71	71
	KRIDL	9	9	9
	Co Operative	13	13	13
	Others	36	36	36
Grand Total :		**129**	**129**	**129**

ಗ್ರಾಮವಾರು ವಿವರಗಳನ್ನು **ಅನುಬಂಧ-2ರಲ್ಲಿ** ಅಡಕವಿರಿಸಿದೆ.

ಈ) ಶುದ್ಧ ನೀರಿನ ಘಟಕಗಳ ಸ್ಥಾಪನೆಗೆ ಇರುವ ಮಾನದಂಡಗಳೇನು;

ಗ್ರಾಮೀಣ ಭಾಗಗಳಲ್ಲಿ ಜಲಮೂಲಗಳು ಕಲುಷಿತವೆಂದು ಕಂಡುಬಂದಲ್ಲಿ ಜಲಮೂಲಗಳ ಮಾದರಿಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕುಡಿಯುವ ನೀರು ಪರೀಕ್ಷಾ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಮತ್ತು ಅದೇ ನೀರಿನ ಮಾದರಿಯನ್ನು NABL Accredited ಪರೀಕ್ಷಾ ಪ್ರಯೋಗಾಲಯದಲ್ಲಿ ಹಾಗೂ Karnataka State Pollution Control Board ಪ್ರಯೋಗಾಲಯಗಳಲ್ಲಿ ಪರೀಕ್ಷಿಸುವುದು, ಈ ಮೂರು ಪರೀಕ್ಷಾ ವರದಿಗಳನ್ನು ಆಧರಿಸಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗುತ್ತದೆ.

ಉ) ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಯನ್ನು ಯಾರಿಗೆ ವಹಿಸಲಾಗಿದೆ;

ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಯನ್ನು ಮೆ.ರಾಂಚ್ ಪಾಲಿಮರ್ಸ್, ಮೆ.ಈಸಾವ್ಯಾಸ ಟೆಕ್ನಾಲಜಿಸ್, ಹೆಚ್.ನಾರಾಯಣಪ್ಪ ಹಾಗೂ ಮೆ.ಜಲಸಿರಿ ಮಿನರಲ್ಸ್ ವಾಟರ್ ಪ್ರೈ ಲಿ., ರವರು ನಿರ್ವಹಿಸುತ್ತಿದ್ದಾರೆ.

ಊ) ನೆಲಮಂಗಲ ಕ್ಷೇತ್ರದ ಕೆಲವು ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಗ್ರಾಮೀಣ ಭಾಗಗಳಲ್ಲಿ ಜಲಮೂಲಗಳು ಕಲುಷಿತವೆಂದು ಕಂಡುಬಂದಲ್ಲಿ ಮಾತ್ರ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗುತ್ತದೆ.

ಸಂ:ಗ್ರಾಕುನೀ&ನೈಇ 69 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

...ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಅನುಬಂಧ-1

ವಿಧಾನಸಭೆಯ ಸದಸ್ಯರಾದ ಶ್ರೀ ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1675

Sl.no	Taluk	Grama Panchayat	Village/ Habitation	Approved Year	Agency (Dept. Tender / KRIDL/ Co opr / Others)
1	NELAMANGALA	AGALAKUPPE	KAMALAPURA	2017-18	Dept. Tender
2	NELAMANGALA	AGALAKUPPE	HALENIJAGAL	2017-18	Dept. Tender
3	NELAMANGALA	ARASHINAKUNTE	ARASHINAKUNTE	2017-18	Dept. Tender
4	NELAMANGALA	ARASHINAKUNTE	DANOJIPALYA	2017-18	Dept. Tender
5	NELAMANGALA	ARASHINAKUNTE	HONNAGANGAINAPAL	2017-18	Dept. Tender
6	NELAMANGALA	ARASHINAKUNTE	VINAYAKANAGARA	2017-18	Dept. Tender
7	NELAMANGALA	BASAVANAHALLI	Lohithnagara	2017-18	Dept. Tender
8	NELAMANGALA	BASAVANAHALLI	RENUKANAGARA	2017-18	Dept. Tender
9	NELAMANGALA	BASAVANAHALLI	VALMIKINAGARA	2017-18	Dept. Tender
10	NELAMANGALA	BUDHIHAL	MANDIGERE	2017-18	Dept. Tender
11	NELAMANGALA	BUDHIHAL	BARADI	2017-18	Dept. Tender
12	NELAMANGALA	BUDHIHAL	KACHANAHALLI	2017-18	Dept. Tender
13	NELAMANGALA	BUDHIHAL	MACHONAYAKANAHA	2017-18	Dept. Tender
14	NELAMANGALA	BUDHIHAL	YERAMACHANAHALLI	2017-18	Dept. Tender
15	NELAMANGALA	DODDABELE	TADASIGHATTA	2017-18	Dept. Tender
16	NELAMANGALA	GOLAHALLI	GOLAHALLI	2017-18	Dept. Tender
17	NELAMANGALA	HASIRUVALLI	CHIKKANAHALLI	2017-18	Dept. Tender
18	NELAMANGALA	HASIRUVALLI	JAKKANAHALLI	2017-18	Dept. Tender
19	NELAMANGALA	HASIRUVALLI	VADAKUNTE	2017-18	Dept. Tender
20	NELAMANGALA	HASIRUVALLI	VARADANAYAKANAH	2017-18	Dept. Tender
21	NELAMANGALA	SHIVAGANGE	KAMBAL	2017-18	Dept. Tender
22	NELAMANGALA	SHIVAGANGE	MACHONAHALLI	2017-18	Dept. Tender
23	NELAMANGALA	SHIVAGANGE	SHIVANANDHANAGAR	2017-18	Dept. Tender
24	NELAMANGALA	SOLADEVANAHALLI	VASANTHNAGAR	2017-18	Dept. Tender
25	NELAMANGALA	T.BEGUR	BYRANAHALLI	2017-18	Dept. Tender
26	NELAMANGALA	THYAMAGONDLU	THYAMAGONDLU 4TH	2017-18	Dept. Tender
27	NELAMANGALA	THYAMAGONDLU	THYAMAGONDLU 4TH	2017-18	Dept. Tender
28	NELAMANGALA	VAJARAHALLI	JYOTHINAGARA	2017-18	Dept. Tender
29	NELAMANGALA	YENTAGANAHALLI	BOOSANDRA	2017-18	Dept. Tender
30	NELAMANGALA	YENTAGANAHALLI	KODAPANAHALLI	2017-18	Dept. Tender
31	NELAMANGALA	BANAWADI	BANAWADI	2017-18	Dept. Tender
32	NELAMANGALA	BANAWADI	BANAWADI	2017-18	Dept. Tender
33	NELAMANGALA	BANAWADI	VEERAPURA	2017-18	Dept. Tender

34	NELAMANGALA	LAKENAHALLI	LAKENAHALLI	2017-18	Dept. Tender
35	NELAMANGALA	LAKENAHALLI	LAKENAHALLI	2017-18	Dept. Tender
36	NELAMANGALA	LAKENAHALLI	KANASANDRA	2017-18	Dept. Tender
37	NELAMANGALA	LAKENAHALLI	HOSAHALLI	2017-18	Dept. Tender
38	NELAMANGALA	LAKENAHALLI	KORAMANGALA	2017-18	Dept. Tender
39	NELAMANGALA	LAKENAHALLI	KORAMANGALA	2017-18	Dept. Tender
40	NELAMANGALA	LAKENAHALLI	MARIKUPPE	2017-18	Dept. Tender
41	NELAMANGALA	MOTAGONDANAHALLI	MOTAGONDANAHALLI	2017-18	Dept. Tender
42	NELAMANGALA	MOTAGONDANAHALLI	MOTAGONDANAHALLI	2017-18	Dept. Tender
43	NELAMANGALA	MOTAGONDANAHALLI	GEEJAGARAGUPPE	2017-18	Dept. Tender
44	NELAMANGALA	MOTAGONDANAHALLI	BASAVENAHALLI	2017-18	Dept. Tender
45	NELAMANGALA	SOLUR	SOLUR	2017-18	Dept. Tender
46	NELAMANGALA	SOLUR	CHIKSOLUR	2017-18	Dept. Tender
47	NELAMANGALA	SOLUR	TATTEKERE	2017-18	Dept. Tender
48	NELAMANGALA	SOLUR	BAYADRAHALLI	2017-18	Dept. Tender
49	NELAMANGALA	SOLUR	SOMEDEVANAHALLI	2017-18	Dept. Tender
50	NELAMANGALA	BITTASANDRA	BITTASANDRA	2017-18	Dept. Tender
51	NELAMANGALA	BITTASANDRA	ENEGERE	2017-18	Dept. Tender
52	NELAMANGALA	GUDEMARANAHALLI	GUDEMARANAHALLI	2017-18	Dept. Tender
53	NELAMANGALA	GUDEMARANAHALLI	GUDEMARANAHALLI	2017-18	Dept. Tender
54	NELAMANGALA	GUDEMARANAHALLI	GUDEMARANAHALLI	2017-18	Dept. Tender
55	NELAMANGALA	GUDEMARANAHALLI	HAKINALU	2017-18	Dept. Tender

ಅನುಬಂಧ–2

ವಿಧಾನಸಭೆಯ ಸದಸ್ಯರಾದ ಶ್ರೀ ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1675

Sl.no	Taluk	Grama Panchayat	Village/ Habitation	Approved Year	Agency (Dept. Tender / KRIDL/ Co opr / Others)
1	NELAMANGALA	AGALAKUPPE	AGALAKUPPE	2015-16	Dept. Tender
2	NELAMANGALA	AGALAKUPPE	DEVARAHOSAHALLI	2015-16	CO-OPERATIVE
3	NELAMANGALA	AGALAKUPPE	LAKKUR	2015-16	Dept. Tender
4	NELAMANGALA	AGALAKUPPE	KAMALAPURA	2017-18	Dept. Tender
5	NELAMANGALA	AGALAKUPPE	DEVARAHOSAHALLI	2017-18	OTHERS
6	NELAMANGALA	AGALAKUPPE	HALENIJAGAL	2017-18	Dept. Tender
7	NELAMANGALA	ARASHINAKUNTE	ADARSHANAGARA	2015-16	OTHERS
8	NELAMANGALA	ARASHINAKUNTE	BINNA MANGALA	2015-16	Dept. Tender
9	NELAMANGALA	ARASHINAKUNTE	ARASHINAKUNTE	2016-17	KRIDL
10	NELAMANGALA	ARASHINAKUNTE	BINNA MANGALA	2016-17	OTHERS
11	NELAMANGALA	ARASHINAKUNTE	JAKKASANDRA	2016-17	KRIDL
12	NELAMANGALA	ARASHINAKUNTE	VINAYAKANAGARA	2016-17	OTHERS
13	NELAMANGALA	ARASHINAKUNTE	ARASHINAKUNTE	2017-18	Dept. Tender
14	NELAMANGALA	ARASHINAKUNTE	DANOJIPALYA	2017-18	Dept. Tender
15	NELAMANGALA	ARASHINAKUNTE	HONNAGANGAINAPAL	2017-18	Dept. Tender
16	NELAMANGALA	ARASHINAKUNTE	VINAYAKANAGARA	2017-18	Dept. Tender
17	NELAMANGALA	AREBOMMANAHALLI	AREBOMMANAHALLI	2015-16	Dept. Tender
18	NELAMANGALA	AREBOMMANAHALLI	KEMPAPURA	2015-16	CO-OPERATIVE
19	NELAMANGALA	BASAVANAHALLI	BOLAMARANAHALLI	2015-16	CO-OPERATIVE
20	NELAMANGALA	BASAVANAHALLI	BASAVANAHALLI	2016-17	KRIDL
21	NELAMANGALA	BASAVANAHALLI	Lohithnagara	2016-17	KRIDL
22	NELAMANGALA	BASAVANAHALLI	Lohithnagara	2017-18	Dept. Tender
23	NELAMANGALA	BASAVANAHALLI	RENUKANAGARA	2017-18	Dept. Tender
24	NELAMANGALA	BASAVANAHALLI	VALMIKINAGARA	2017-18	Dept. Tender
25	NELAMANGALA	BUDHIHAL	BUDHIHAL	2015-16	Dept. Tender
26	NELAMANGALA	BUDHIHAL	BOMMANAHALLI	2016-17	OTHERS
27	NELAMANGALA	BUDHIHAL	DEGANAHALLI	2016-17	OTHERS
28	NELAMANGALA	BUDHIHAL	THONACHINAKUPE	2016-17	OTHERS
29	NELAMANGALA	BUDHIHAL	MANDIGERE	2017-18	Dept. Tender
30	NELAMANGALA	BUDHIHAL	BARADI	2017-18	Dept. Tender
31	NELAMANGALA	BUDHIHAL	KACHANAHALLI	2017-18	Dept. Tender
32	NELAMANGALA	BUDHIHAL	MACHONAYAKANAHA	2017-18	Dept. Tender

Sl.no	Taluk	Grama Panchayat	Village/ Habitation	Approved Year	Agency (Dept. Tender / KRIDL/ Co opr / Others)
33	NELAMANGALA	BUDHIHAL	YERAMACHANAHALLI	2017-18	Dept. Tender
34	NELAMANGALA	DODDABELE	DODDABELE	2015-16	Dept. Tender
35	NELAMANGALA	DODDABELE	DODDACHONOVALLI	2016-17	OTHERS
36	NELAMANGALA	DODDABELE	TADASIGHATTA	2017-18	Dept. Tender
37	NELAMANGALA	GOLAHALLI	GOLLAHALLI	2015-16	CO-OPERATIVE
38	NELAMANGALA	GOLAHALLI	ARJUNABETTAHALLI	2016-17	OTHERS
39	NELAMANGALA	GOLAHALLI	GOLAHALLI	2017-18	Dept. Tender
40	NELAMANGALA	HASIRUVALLI	HASURAVALLI	2015-16	CO-OPERATIVE
41	NELAMANGALA	HASIRUVALLI	CHIKKANAHALLI	2017-18	Dept. Tender
42	NELAMANGALA	HASIRUVALLI	JAKKANAHALLI	2017-18	Dept. Tender
43	NELAMANGALA	HASIRUVALLI	VADAKUNTE	2017-18	Dept. Tender
44	NELAMANGALA	HASIRUVALLI	VARADANAYAKANAH	2017-18	Dept. Tender
45	NELAMANGALA	HONNENAHALLI	BARAGENAHALLI	2015-16	CO-OPERATIVE
46	NELAMANGALA	HONNENAHALLI	HONNENAHALLI	2017-18	OTHERS
47	NELAMANGALA	HONNENAHALLI	KENGAL KEMPAPURA	2017-18	OTHERS
48	NELAMANGALA	HONNENAHALLI	DEVAGANAHALLI	2019-20	OTHERS
49	NELAMANGALA	KALALAGHATTA	KALALAGHATTA	2015-16	Dept. Tender
50	NELAMANGALA	KALALAGHATTA	GOVENAHALLI	2016-17	OTHERS
51	NELAMANGALA	KALALAGHATTA	MINNAPURA	2016-17	OTHERS
52	NELAMANGALA	KODIGEHALLI	KODIGEHALLI	2015-16	Dept. Tender
53	NELAMANGALA	KODIGEHALLI	OBALAPURA	2015-16	Dept. Tender
54	NELAMANGALA	KODIGEHALLI	OBALAPURA	2016-17	OTHERS
55	NELAMANGALA	KULUVANAHALLI	BILLANAKOTE	2015-16	CO-OPERATIVE
56	NELAMANGALA	KULUVANAHALLI	KEREKATTHIGANOOR	2015-16	CO-OPERATIVE
57	NELAMANGALA	KULUVANAHALLI	KULUVANAHALLI	2015-16	CO-OPERATIVE
58	NELAMANGALA	KULUVANAHALLI	KULUVANAHALLI	2017-18	OTHERS
59	NELAMANGALA	KULUVANAHALLI	LAKKENAHALLI	2019-20	OTHERS
60	NELAMANGALA	KULUVANAHALLI	DODDERI	2019-20	OTHERS
61	NELAMANGALA	KULUVANAHALLI	HANUMANTHAPURA	2019-20	OTHERS
62	NELAMANGALA	MANNE	MANNE	2015-16	Dept. Tender
63	NELAMANGALA	MANNE	MUDDALINGANA	2015-16	CO-OPERATIVE
64	NELAMANGALA	MARALAKUNTE	BARAGURU	2015-16	Dept. Tender
65	NELAMANGALA	MARALAKUNTE	MARALAKUNTE	2015-16	Dept. Tender
66	NELAMANGALA	NARASIPURA	NARASIPURA	2015-16	Dept. Tender
67	NELAMANGALA	SHIVAGANGE	MARAGONDANAHALI	2015-16	CO-OPERATIVE
68	NELAMANGALA	SHIVAGANGE	SHIVAGANGE	2015-16	Dept. Tender
69	NELAMANGALA	SHIVAGANGE	KAMBAL	2017-18	Dept. Tender

Sl.no	Taluk	Grama Panchayat	Village/ Habitation	Approved Year	Agency (Dept. Tender / KRIDL/ Co opr / Others)
70	NELAMANGALA	SHIVAGANGE	MACHONAHALLI	2017-18	Dept. Tender
71	NELAMANGALA	SHIVAGANGE	SHIVANANDHANAGAR	2017-18	Dept. Tender
72	NELAMANGALA	SOLADEVANAHALLI	DARMANAYAKANA	2015-16	CO-OPERATIVE
73	NELAMANGALA	SOLADEVANAHALLI	SOLADEVANAHALLI	2015-16	Dept. Tender
74	NELAMANGALA	SOLADEVANAHALLI	VASANTHNAGAR	2017-18	Dept. Tender
75	NELAMANGALA	SOMPURA	NIDUVANDA	2015-16	OTHERS
76	NELAMANGALA	SOMPURA	SOMPURA	2016-17	OTHERS
77	NELAMANGALA	SOMPURA	THATTEKERE	2016-17	OTHERS
78	NELAMANGALA	SOMPURA	YEDEHALLI COLONY	2016-17	OTHERS
79	NELAMANGALA	SOMPURA	SOMPURA	2017-18	OTHERS
80	NELAMANGALA	SOMPURA	YEDEHALLI	2017-18	OTHERS
81	NELAMANGALA	SRINIVASAPURA	SRINIVASAPURA	2015-16	CO-OPERATIVE
82	NELAMANGALA	T.BEGUR	T.BEGUR	2016-17	KRIDL
83	NELAMANGALA	T.BEGUR	T.BEGUR	2016-17	OTHERS
84	NELAMANGALA	T.BEGUR	BYRANAHALLI	2017-18	Dept. Tender
85	NELAMANGALA	THYAMAGONDLU	THYAMAGONDLU	2016-17	KRIDL
86	NELAMANGALA	THYAMAGONDLU	THYAMAGONDLU 4TH	2017-18	Dept. Tender
87	NELAMANGALA	THYAMAGONDLU	THYAMAGONDLU 4TH	2017-18	Dept. Tender
88	NELAMANGALA	VAJARAHALLI	VAJARAHALLI	2016-17	OTHERS
89	NELAMANGALA	VAJARAHALLI	VAJARAHALLI	2016-17	OTHERS
90	NELAMANGALA	VAJARAHALLI	VAJARAHALLI	2016-17	KRIDL
91	NELAMANGALA	VAJARAHALLI	JYOTHINAGARA	2017-18	Dept. Tender
92	NELAMANGALA	VISHWESHWARAPURA	GANGADARANAPALYA	2016-17	OTHERS
93	NELAMANGALA	VISHWESHWARAPURA	ISLAMPURA	2016-17	OTHERS
94	NELAMANGALA	VISHWESHWARAPURA	ISLAMPURA	2016-17	OTHERS
95	NELAMANGALA	VISHWESHWARAPURA	VEERANANJIPURA	2016-17	OTHERS
96	NELAMANGALA	VISHWESHWARAPURA	VEERAGAVANAPALYA	2016-17	OTHERS
97	NELAMANGALA	VISHWESHWARAPURA	KANEGOWDANAHALLI	2016-17	KRIDL
98	NELAMANGALA	VISHWESHWARAPURA	VISHWESHWARAPURA	2016-17	KRIDL
99	NELAMANGALA	YENTAGANAHALLI	YENTAGANAHALLI	2015-16	Dept. Tender
100	NELAMANGALA	YENTAGANAHALLI	MALLARABANAWADI	2016-17	OTHERS
101	NELAMANGALA	YENTAGANAHALLI	MAHADEVPURA	2016-17	OTHERS
102	NELAMANGALA	YENTAGANAHALLI	BOOSANDRA	2017-18	Dept. Tender
103	NELAMANGALA	YENTAGANAHALLI	KODAPANAHALLI	2017-18	Dept. Tender
104	NELAMANGALA	YENTAGANAHALLI	HANCHIPURA	2017-18	OTHERS
105	NELAMANGALA	BANAWADI	BANAWADI	2017-18	Dept. Tender
106	NELAMANGALA	BANAWADI	BANAWADI	2017-18	Dept. Tender

Sl.no	Taluk	Grama Panchayat	Village/ Habitation	Approved Year	Agency (Dept. Tender / KRIDL/ Co opr / Others)
107	NELAMANGALA	BANAWADI	VEERAPURA	2017-18	Dept. Tender
108	NELAMANGALA	LAKENAHALLI	LAKENAHALLI	2017-18	Dept. Tender
109	NELAMANGALA	LAKENAHALLI	LAKENAHALLI	2017-18	Dept. Tender
110	NELAMANGALA	LAKENAHALLI	KANASANDRA	2017-18	Dept. Tender
111	NELAMANGALA	LAKENAHALLI	HOSAHALLI	2017-18	Dept. Tender
112	NELAMANGALA	LAKENAHALLI	KORAMANGALA	2017-18	Dept. Tender
113	NELAMANGALA	LAKENAHALLI	KORAMANGALA	2017-18	Dept. Tender
114	NELAMANGALA	LAKENAHALLI	MARIKUPPE	2017-18	Dept. Tender
115	NELAMANGALA	MOTAGONDANAHALLI	MOTAGONDANAHALLI	2017-18	Dept. Tender
116	NELAMANGALA	MOTAGONDANAHALLI	MOTAGONDANAHALLI	2017-18	Dept. Tender
117	NELAMANGALA	MOTAGONDANAHALLI	GEEJAGARAGUPPE	2017-18	Dept. Tender
118	NELAMANGALA	MOTAGONDANAHALLI	BASAVENAHALLI	2017-18	Dept. Tender
119	NELAMANGALA	SOLUR	SOLUR	2017-18	Dept. Tender
120	NELAMANGALA	SOLUR	CHIKSOLUR	2017-18	Dept. Tender
121	NELAMANGALA	SOLUR	TATTEKERE	2017-18	Dept. Tender
122	NELAMANGALA	SOLUR	BAYADRAHALLI	2017-18	Dept. Tender
123	NELAMANGALA	SOLUR	SOMEDEVANAHALLI	2017-18	Dept. Tender
124	NELAMANGALA	BITTASANDRA	BITTASANDRA	2017-18	Dept. Tender
125	NELAMANGALA	BITTASANDRA	ENEGERE	2017-18	Dept. Tender
126	NELAMANGALA	GUDEMARANAHALLI	GUDEMARANAHALLI	2017-18	Dept. Tender
127	NELAMANGALA	GUDEMARANAHALLI	GUDEMARANAHALLI	2017-18	Dept. Tender
128	NELAMANGALA	GUDEMARANAHALLI	GUDEMARANAHALLI	2017-18	Dept. Tender
129	NELAMANGALA	GUDEMARANAHALLI	HAKINALU	2017-18	Dept. Tender

ಕರ್ನಾಟಕ ಸರಕಾರ

ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ

ಕಂದಾಯ ಇಲಾಖೆ

ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009. ದೂರವಾಣಿ ಸಂಖ್ಯೆ: 080-22232040/22232012

ದಿನಾಂಕ: 12.03.2021

ಸಂಖ್ಯೆ: DSSP/LAQ- 17/2021

1346 ofs 10-3-21-

ಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ವೇದವ್ಯಾಸ ಕಾಮತ್ ಡಿ (ಮಂಗಳೂರು ನಗರ ದಕ್ಷಿಣ) ರವರ ಚುಕ್ಕೆ ಗುರುತಿಲ್ಲದ ಪ್ರ.ಸಂ. 1413 ಕ್ಕೆ ಉತ್ತರಿಸುವ ಕುರಿತು.

ಉಲ್ಲೇಖ: ಕಾರ್ಯದರ್ಶಿಗಳು, ಕರ್ನಾಟಕ ವಿಧಾನಸಭೆ, ಬೆಂಗಳೂರು ರವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/9ಮುಉ/ಪ್ರ.ಸಂ. 1413/2021, ದಿನಾಂಕ 01.03.2021.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ವೇದವ್ಯಾಸ ಕಾಮತ್ ಡಿ (ಮಂಗಳೂರು ನಗರ ದಕ್ಷಿಣ) ರವರ ಚುಕ್ಕೆ ಗುರುತಿಲ್ಲದ ಪ್ರ.ಸಂ. 1413 ಕ್ಕೆ ಕೋರಿರುವ ಪ್ರಶ್ನೆಗೆ ಈ ನಿರ್ದೇಶನಾಲಯಕ್ಕೆ ಸಂಬಂಧಿಸಿದ ಉತ್ತರವನ್ನು ಸಿದ್ದಪಡಿಸಿ 25 ಪ್ರತಿಗಳಲ್ಲಿ ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ತಮ್ಮ ವಿಶ್ವಾಸಿ,

K. Kamala

ತಹಸೀಲ್ದಾರ್,
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ
ನಿರ್ದೇಶನಾಲಯ, ಕಂದಾಯ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1413
ಸದಸ್ಯರ ಹೆಸರು	ಶ್ರೀ ವೇದವ್ಯಾಸ ಕಾಮತ್ ಡಿ. (ಮಂಗಳೂರು ನಗರ ದಕ್ಷಿಣ)
ವಿಷಯ	ವಿಕಲಚೇತನರ ಮಾಶಾಸನವನ್ನು ಹೆಚ್ಚಿಸಲು
ಉತ್ತರಿಸಬೇಕಾದ ದಿನಾಂಕ	10.03.2021
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಪ್ರಶ್ನೆ	ಉತ್ತರ
ಅ) ರಾಜ್ಯದಲ್ಲಿರುವ ವಿಶೇಷ ವಿಕಲಚೇತನರಿಗೆ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವಿಕಲಚೇತನರಿಗೆ ಪ್ರಸ್ತುತ ನೀಡಲಾಗುತ್ತಿರುವ ಮಾಸಿಕ ಮೊತ್ತವನ್ನು ಹೆಚ್ಚಿಸುವ ಬಗ್ಗೆ ಪ್ರಸ್ತಾವನೆ ಪರಿಶೀಲನಾ ಹಂತದಲ್ಲಿರುತ್ತದೆ.
ಆ) ಬಂದಿದ್ದಲ್ಲಿ, ವಿಕಲಚೇತನರ ಮಾಸಾಶನ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	
ಇ) ಪ್ರಸ್ತುತ ರಾಜ್ಯದಲ್ಲಿ ಎಷ್ಟು ವಿಕಲಚೇತನರು ಮಾಸಾಶನವನ್ನು ಪಡೆಯುತ್ತಿದ್ದಾರೆ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)	ಪ್ರಸ್ತುತ ರಾಜ್ಯದಲ್ಲಿ ಒಟ್ಟು 8,45,822 ವಿಕಲಚೇತನರು ಮಾಸಾಶನವನ್ನು ಪಡೆಯುತ್ತಿದ್ದು, ಜಿಲ್ಲಾವಾರು ವಿವರವನ್ನು ಅನುಬಂಧ 1 ರಲ್ಲಿ ಲಗತ್ತಿಸಿದೆ.
ಈ) ವಿಕಲಚೇತನರಿಗೆ ಮಾಸಾಶನದ ಜೊತೆಗೆ ಇತರ ಸೌಲಭ್ಯಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಇತರ ಸೌಲಭ್ಯಗಳನ್ನು ಒದಗಿಸುತ್ತಿದ್ದಲ್ಲಿ ಸೌಲಭ್ಯಗಳ ಸಂಪೂರ್ಣ ಮಾಹಿತಿ ನೀಡುವುದು?	ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾವತಿಯಿಂದ ವಿಕಲಚೇತನರಿಗಾಗಿ ನೀಡುತ್ತಿರುವ ಸೌಲಭ್ಯಗಳ ಸಂಪೂರ್ಣ ಮಾಹಿತಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

ಸಂಖ್ಯೆ : ಡಿಎಸ್‌ಎಸ್‌ಪಿ - ಎಲ್ ಎ ಕ್ಯೂ/17/2021

[ಆರ್. ಅಶೋಕ]
ಕಂದಾಯ ಸಚಿವರು

ಅನುಬಂಧ-01

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ವಿಕಲಚೇತನರಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳು

(ಎ) ಶೈಕ್ಷಣಿಕ:-

1) ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಶಾಲೆಗಳು:

ಶ್ರವಣದೋಷವುಳ್ಳ ಮಕ್ಕಳಿಗಾಗಿ ಮೈಸೂರು, ಕಲಬುರ್ಗಿ, ಬಳ್ಳಾರಿ, ಬೆಳಗಾವಿ ಜಿಲ್ಲೆಗಳಲ್ಲಿ 4 ಕಿವುಡು ಮಕ್ಕಳ ವಸತಿ ಶಾಲೆಗಳನ್ನು ಇಲಾಖಾವತಿಯಿಂದ ನಡೆಸಲಾಗುತ್ತಿದೆ.ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ವಸತಿ, ಊಟ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ.ಈ ಪೈಕಿ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ಬೆಳಗಾವಿಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

2) ಅಂಧ ಮಕ್ಕಳಿಗಾಗಿ ವಸತಿಯುತ ಶಾಲೆಗಳು:

ಅಂಧ ಮಕ್ಕಳಿಗಾಗಿ ಕಲಬುರ್ಗಿ, ಮೈಸೂರು, ದಾವಣಗೆರೆ ಹಾಗೂ ಹುಬ್ಬಳ್ಳಿಯಲ್ಲಿ ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ.ಈ ಶಾಲೆಗಳಲ್ಲಿ ದೃಷ್ಟಿದೋಷವುಳ್ಳ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ.ಈ ಪೈಕಿ ದೃಷ್ಟಿದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ದಾವಣಗೆರೆಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

3) 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳು:

1982ರ ರಾಜ್ಯ ಅನುದಾನ ಸಂಹಿತೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 34 ವಿಶೇಷ ಶಾಲೆ/ ತರಬೇತಿ ಕೇಂದ್ರಗಳನ್ನು ದೈಹಿಕ, ಅಂಧ, ಶ್ರವಣದೋಷ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಡೆಸಲಾಗುತ್ತಿದೆ.ರಾಜ್ಯ ಸರ್ಕಾರದಿಂದ ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

(ಅ) ವಿಕಲಚೇತನರಿಗೆ ವೃತ್ತಿ ತರಬೇತಿ ಕೇಂದ್ರಗಳು:

ಈ ಯೋಜನೆಯಡಿ ವಿವಿಧ ರೀತಿಯ ವಿಕಲಚೇತನರಿಗೆ ವೃತ್ತಿ ತರಬೇತಿಯನ್ನು ನೀಡುವುದಾಗಿದೆ.1982ರ ರಾಜ್ಯ ಅನುದಾನ ಸಂಹಿತೆಯಡಿ 5 ವೃತ್ತಿ ತರಬೇತಿ ಕೇಂದ್ರಗಳನ್ನು ರಾಜ್ಯ ಸಹಾಯಾನುದಾನದಡಿ ಬೆಂಗಳೂರಿನಲ್ಲಿ 03 ಮತ್ತು ಮೈಸೂರಿನಲ್ಲಿ 02 ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ವಾಕ್ ಶ್ರವಣ ಕೇಂದ್ರವನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. ವೃತ್ತಿ ತರಬೇತಿ ಕೇಂದ್ರಗಳಲ್ಲಿ ವಿವಿಧ ರೀತಿಯ ವಿಕಲಚೇತನರಿಗೆ ಫಿಟ್ಟರ್, ಟರ್ನರ್, ಸರಳ ಇಂಜಿನಿಯರಿಂಗ್, ಬೆತ್ತ, ಹಗ್ಗ, ಚಾಪೆ ಹೆಣೆಯುವುದು ಹಾಗೂ ಪ್ಲಾಸ್ಟಿಕ್ ಮೌಲ್ಡಿಂಗ್ ತರಬೇತಿಯನ್ನು ನೀಡಲಾಗುತ್ತಿದೆ.ಪ್ರತಿ ತರಬೇತಿ ಕೇಂದ್ರದಲ್ಲಿ ವಾರ್ಷಿಕ 25 ಫಲಾನುಭವಿಗಳು ತರಬೇತಿ ಪಡೆಯಲು ಅವಕಾಶವಿರುತ್ತದೆ.

(ಆ)ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ:

ಈ ಯೋಜನೆಯಡಿ ಬುದ್ಧಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 138 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶ್ರವಣದೋಷವುಳ್ಳ ಹಾಗೂ ದೃಷ್ಟಿದೋಷವುಳ್ಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6200/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.5200/- ರಂತೆ ಹಾಗೂ ಬುದ್ಧಿಮಾಂದ್ಯ ಮಕ್ಕಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6800/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ. 6000/- ರಂತೆ ವರ್ಷದಲ್ಲಿ 10 ತಿಂಗಳ ಅವಧಿಗೆ ಅನುದಾನವನ್ನು ಮಂಜೂರು ಮಾಡಲಾಗುತ್ತಿದೆ.ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಮಕ್ಕಳ ಆಹಾರ ವೆಚ್ಚ, ಕಟ್ಟಡದ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ, ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳು ಒಳಗೊಂಡಿರುತ್ತವೆ.

(ಇ) ಕೇಂದ್ರ ಸರ್ಕಾರದ ದೀನ್‌ದಯಾಳ್ ಪುನರ್ವಸತಿ ಯೋಜನೆಯಡಿ 8 ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿಶೇಷ ಶಾಲೆ /ವೃತ್ತಿ ತರಬೇತಿ ಕೇಂದ್ರಗಳು ನಡೆಯುತ್ತಿದ್ದು, ಸದರಿ ಶಾಲೆ ಹಾಗೂ ತರಬೇತಿ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಶೇ.90ರಷ್ಟು ಅನುದಾನವನ್ನು ಮಂಜೂರು ಮಾಡಲಾಗುತ್ತಿದ್ದು, ಉಳಿದ ಶೇ.10ರಷ್ಟು ವೆಚ್ಚವನ್ನು ಸಂಸ್ಥೆಯವರು ಭರಿಸಬೇಕಾಗಿರುತ್ತದೆ.

4) ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹಧನ:
ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು ಮಾಡಲಾಗುತ್ತಿದೆ. 2001-02ನೇ ಸಾಲಿನಿಂದ ಈ ಯೋಜನೆಯ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

5) ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ:
ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದಾಗಿದೆ.ಈ ಯೋಜನೆಯನ್ನು 2001-02ನೇ ಸಾಲಿನಿಂದ ಬಿ.ಎಡ್, ಎಂ.ಎಡ್. ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

6) ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು 2013-14ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ. ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ

7) ಬ್ರೈಲ್ ಮುದ್ರಣಾಲಯ:
ದೃಷ್ಟಿದೋಷವುಳ್ಳ ಮಕ್ಕಳಿಗೆ ಬೇಕಾಗುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಸಂಬಂಧಪಟ್ಟ ಅಂಧರ ಶಾಲೆಗಳಿಗೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.

8) ವಿಶೇಷ ಶಿಕ್ಷಣ ತರಬೇತಿ ಕೇಂದ್ರ ಯೋಜನೆ:
ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು ತಲಾ ಒಂದರಂತೆ ವಿಶೇಷ ಶಿಕ್ಷಕರ ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ನಡೆಸುತ್ತಿದ್ದು, ಪ್ರತಿ ವರ್ಷ ಪ್ರತಿ ಕೇಂದ್ರದಲ್ಲಿ 25 ಪ್ರಶಿಕ್ಷಣಾರ್ಥಿಗಳು ತರಬೇತಿ ಪಡೆಯಲು ಅವಕಾಶವಿರುತ್ತದೆ.

9) ಮಾನಸಿಕ ಅಸ್ವಸ್ಥ, ಸೆರೆಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು: ಸೆರೆಬ್ರಲ್ ಪಾಲ್ಸಿ, ಆಟಿಸಂ, ಮಾನಸಿಕ ಅಸ್ವಸ್ಥ ಹಾಗೂ ತೀವ್ರತರದ ಅಂಗವೈಕಲ್ಯತೆ ಹೊಂದಿರುವ ಮೂರರಿಂದ 25 ವರ್ಷದ ಒಳಗಿನ ಮಕ್ಕಳಿಗಾಗಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಪ್ರತಿ ಕೇಂದ್ರದಲ್ಲಿ 25 ಮಕ್ಕಳನ್ನು ದಾಖಲಿಸಲು ಅವಕಾಶವಿದ್ದು, ಪ್ರತಿ ಮಗುವಿಗೆ ಮಾಸಿಕ ರೂ.10,000/-ಗಳಂತೆ ವಾರ್ಷಿಕ 25.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.

(ಬಿ) ಉದ್ಯೋಗ ಮತ್ತು ತರಬೇತಿ:

1) ಅಂಗವಿಕಲ ಪುರುಷ ಹಾಗೂ ಮಹಿಳೆಯರ ವಸತಿನಿಲಯ:

ಬೆಂಗಳೂರಿನ ಕೆಂಗೇರಿಯಲ್ಲಿ ವಿಕಲಚೇತನ ಮಹಿಳೆ ಮತ್ತು ವಿಕಲಚೇತನ ಪುರುಷರಿಗಾಗಿ ಅಂಗವಿಕಲ ಉದ್ಯೋಗಸ್ಥ ನೌಕರರು ಮತ್ತು ಪ್ರಶಿಕ್ಷಣಾರ್ಥಿಗಳಿಗಾಗಿ ಮಹಿಳೆಯರು ಹಾಗೂ ಪುರುಷರಿಗಾಗಿ ಪ್ರತ್ಯೇಕವಾದ ವಸತಿ ನಿಲಯವನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ನಡೆಸಲಾಗುತ್ತಿದೆ. ಪ್ರಸ್ತುತ ಈ ಎರಡೂ ವಸತಿ ನಿಲಯಗಳು ಬೆಂಗಳೂರಿನ ಕೆಂಗೇರಿಯಲ್ಲಿ ನಡೆಯುತ್ತಿವೆ. ಪ್ರತಿ ವಸತಿ ನಿಲಯದಲ್ಲಿ 50 ನಿವಾಸಿಗಳನ್ನು ದಾಖಲಿಸಲು ಅವಕಾಶವಿರುತ್ತದೆ.

2) ಆಧಾರ ಯೋಜನೆ :

ವಿಕಲಚೇತನರು ಸ್ವಯಂ ಉದ್ಯೋಗ ಕೈಗೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಎಂಬ ಸಾಲ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಜಾರಿಗೊಳಿಸಲಾಗುತ್ತಿದೆ.ಈ ಯೋಜನೆಯಡಿ ರೂ.1.00 ಲಕ್ಷ ರೂ.ಗಳ ಸಹಾಯಧನವನ್ನು ನೀಡಲು ಅವಕಾಶವಿದ್ದು, ಇದರಲ್ಲಿ ಶೇ.50ರಷ್ಟು ಬಡ್ಡಿ ಸಹಿತವಾಗಿ ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನ ಒದಗಿಸಲಾಗುವುದು.

3) ಗ್ರಾಮೀಣ ಪುನರ್ವಸತಿ ಯೋಜನೆ:

ಈ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.ಪ್ರತಿ ಗ್ರಾಮ ಪಂಚಾಯತಿ ಅಡಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಸಮರ್ಥ ವಿಕಲಚೇತನರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ವಿಕಲಚೇತನರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು, ಸ್ಥಳೀಯ ನಗರ ಪ್ರದೇಶಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರೆಂದು ಮತ್ತು ನಿರ್ದೇಶನಾಲಯದಲ್ಲಿ ರಾಜ್ಯ ಸಂಯೋಜಕರನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ಕಾರ್ಯಕರ್ತರ ಮೂಲಕ ವಿಕಲಚೇತನರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ವಿಕಲಚೇತನರ ಮೂಲಕವೇ ತಲುಪಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ:ಮಮಇ/241/ಪಿಹೆಚ್‌ಪಿ/2019, ದಿನಾಂಕ: 07-02-2020ರಂತೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಹಾಗೂ ನಗರ ಪುನರ್ವಸತಿ ಕಾರ್ಯಕರ್ತರುಗಳ ಗೌರವಧನವನ್ನು ರೂ.3000/-ಗಳಿಂದ ರೂ.6000/-ಗಳಿಗೆ ಹಾಗೂ ವಿವಿದ್ದೊದ್ದೇಶ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ರೂ.6000/-ಗಳಿಂದ ರೂ.12,000/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

4) ಮರಣ ಪರಿಹಾರ ನಿಧಿ ಯೋಜನೆ: ಗ್ರಾಮೀಣ ಪುನರ್ವಸತಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರು ನಿಧನ ಹೊಂದಿದ್ದಲ್ಲಿ ರೂ.50,000/-ಗಳ ಪರಿಹಾರ ಧನ ನೀಡಲು ಅವಕಾಶವಿರುತ್ತದೆ.

5) ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ವಸತಿ ನಿಲಯಗಳು:

ಅಂಗವಿಕಲ ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಗೂ ವಿದ್ಯಾರ್ಥಿನಿ/ತರಬೇತಾರ್ಥಿಗಳಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 25 ಜಿಲ್ಲೆಗಳಲ್ಲಿ ಮಹಿಳಾ ವಸತಿ ನಿಲಯಗಳು (ಬೆಂಗಳೂರು ನಗರ ಜಿಲ್ಲೆಯಲ್ಲಿ 4 ವಸತಿ ನಿಲಯಗಳು) ನಡೆಯುತ್ತಿವೆ. ಸದರಿ ವಸತಿ ನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಹಾಗೂ ತರಬೇತಿದಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸದರಿ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರಿಗೆ ಉಚಿತ ಊಟದ ವ್ಯವಸ್ಥೆಯಿದ್ದು, ಉದ್ಯೋಗಸ್ಥ ಮಹಿಳೆಯರು ಮಾಸಿಕ 800/-ಗಳನ್ನು ಪಾವತಿಸಬೇಕಾಗಿರುತ್ತದೆ. ರಾಮನಗರ, ದಾವಣಗೆರೆ, ರಾಯಚೂರು, ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರು ಈ ಜಿಲ್ಲೆಗಳಲ್ಲಿ ಆಡಳಿತಾತ್ಮಕ ಕಾರಣಗಳಿಂದ ವಸತಿ ನಿಲಯಗಳನ್ನು ನಡೆಯುತ್ತಿಲ್ಲ.

ಸಿ. ಸಾಮಾಜಿಕ ಭದ್ರತಾ ಯೋಜನೆಗಳು:

1) ಸಮಾಜ ಸೇವಾ ಸಂಕೀರ್ಣ:

ನಿರ್ಗತಿಕ ಬುದ್ಧಿಮಾಂದ್ಯ ಪುರುಷರಿಗಾಗಿ ಸಮಾಜ ಸೇವಾ ಸಂಕೀರ್ಣ ಸಂಸ್ಥೆಯು ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿದ್ದು, ಈ ಸಂಸ್ಥೆಯಲ್ಲಿ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಸಂರಕ್ಷಣೆ ಒದಗಿಸಲಾಗುತ್ತಿದೆ. ಪ್ರಸ್ತುತ ಸಂಸ್ಥೆಯಲ್ಲಿ 85 ನಿವಾಸಿಗಳು ದಾಖಲಾಗಿರುತ್ತಾರೆ.

2) ಮಂದಮತಿ ಮಹಿಳೆಯರ ಅನುಪಾಲನಾ ಗೃಹ:

18 ವರ್ಷ ಮೇಲ್ಪಟ್ಟ ನಿರ್ಗತಿಕ ಮಹಿಳಾ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಮತ್ತು ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ ಹಾಗೂ ಹುಬ್ಬಳ್ಳಿಯಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದೆ. ಪ್ರಸ್ತುತ ಬೆಂಗಳೂರು ಅನುಪಾಲನಾ ಕೇಂದ್ರದಲ್ಲಿ 100 ಮಂದಿ ಹಾಗೂ ಹುಬ್ಬಳ್ಳಿ ಅನುಪಾಲನ ಕೇಂದ್ರದಲ್ಲಿ 70 ನಿವಾಸಿಗಳು ದಾಖಲಾಗಿರುತ್ತಾರೆ.

3) ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು:

ಮಾನಸಿಕ ಅಸ್ವಸ್ಥರಿಗಾಗಿ ಮಾನಸ ಕೇಂದ್ರಗಳನ್ನು ಬೆಂಗಳೂರು ನಗರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ನಡೆಸುತ್ತಿದ್ದು, ರಾಜ್ಯ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳಿಂದ ಆದೇಶಿಸಲ್ಪಡುವ ಮಾನಸಿಕ ಅಸ್ವಸ್ಥರನ್ನು ಹಾಗೂ ರಸ್ತೆಗಳಲ್ಲಿ ಓಡಾಡುವ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಲ್ಲಿ ನಿರ್ದಿಷ್ಟ ವೈದ್ಯಕೀಯ ಪ್ರಾಧಿಕಾರದ ಆದೇಶದ ಮೇರೆಗೆ ದಾಖಲಿಸಲು ಅವಕಾಶವಿರುತ್ತದೆ. ಈ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉಚಿತ ಊಟ, ವಸತಿ, ವೈದ್ಯಕೀಯ ಶುಶ್ರೂಷೆ, ವೈದ್ಯಕೀಯ ಸಲಹೆ(ಕೌನ್ಸಲಿಂಗ್) ಸೌಲಭ್ಯವನ್ನು ನೀಡಲಾಗುತ್ತಿದ್ದು, ಇವು ಅಲ್ಪಾವಧಿ ಕೇಂದ್ರಗಳಾಗಿರುತ್ತವೆ.

4) ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ:

ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ: ತಾಯಿ: ಪೋಷಕರ ವಿಮಾ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ:ತಾಯಿ: ಪೋಷಕರು ಮರಣ ಹೊಂದಿದ ನಂತರ ಬುದ್ಧಿಮಾಂದ್ಯ ಮಕ್ಕಳ ಜೀವನ ನಿರ್ವಹಣೆಗಾಗಿ ರೂ.20,000/-ಗಳ ಪರಿಹಾರ ಧನವನ್ನು ಕುಟುಂಬದ ನಾಮ ನಿರ್ದೇಶಿತ ಸದಸ್ಯರಿಗೆ ಪಾವತಿಸಲಾಗುತ್ತಿದೆ.

5) ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ:

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು ಮದುವೆಯಾದ ಸಾಮಾನ್ಯ ವ್ಯಕ್ತಿ ಹಾಗೂ ವಿಕಲಚೇತನರ ಜಂಟಿ ಹೆಸರಿನಲ್ಲಿ 05 ವರ್ಷದ ಅವಧಿಗೆ ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಉಪಯೋಗಿಸುವುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರೆಸಲು ಅವಕಾಶವಿರುತ್ತದೆ.

6) ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ ಒದಗಿಸುವ ಯೋಜನೆ :

ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ.ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ದಂತೆ **5 ವರ್ಷಗಳ** ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ.ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

(ಡಿ) ಪುನರ್ವಸತಿ ಯೋಜನೆಗಳು:

1) ಅಂಗವಿಕಲರಿಗೆ ಸಾಧನ ಸಲಕರಣೆಗಳು :

ಈ ಯೋಜನೆಯಡಿಯಲ್ಲಿ ಅಂಗವಿಕಲರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ರೂ.11,500/- ಮತ್ತು ನಗರ ಪ್ರದೇಶದ ಫಲಾನುಭವಿಗಳಿಗೆ ರೂ.24,000/- ನಿಗದಿಗೊಳಿಸಲಾಗಿದೆ. ಈ ಯೋಜನೆಯಡಿ ರೂ.15,000/-ಗಳ ಮಿತಿಯೊಳಗೆ ವಿಕಲಚೇತನರಿಗೆ ಅವಶ್ಯವಿರುವ ಕ್ಯಾಲಿಪರ್ಸ್, ಕ್ರಚರ್ಸ್, ಶ್ರವಣ ಸಾಧನ, ವೈಟ್ ಕೇನ್, ಬ್ರೈಲ್ ವಾಚ್ ಇನ್ನಿತರ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಅ. ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ :

ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಟಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

ಆ. ತೀವ್ರತೆರನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ :

20 ರಿಂದ 60 ವರ್ಷದ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರಿಗೆ ಓಡಾಡಲು ಅನುಕೂಲವಾಗುವಂತೆ ಜೀವಿತ ಕಾಲದಲ್ಲಿ ಒಂದು ಬಾರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಮಂಜೂರು ಮಾಡಲಾಗುತ್ತದೆ. ಈ ಯೋಜನೆಯಡಿ ಫಲಾನುಭವಿಯ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರಬೇಕಾಗಿರುತ್ತದೆ.

2) ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆ:-

ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.ಈ ಯೋಜನೆಯಡಿ ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು. ಪ್ರಸ್ತುತ 16 ಜಿಲ್ಲೆಗಳಲ್ಲಿ ಜಿಲ್ಲಾ ಪುನರ್ವಸತಿ ಕೇಂದ್ರಗಳು ನಡೆಯುತ್ತಿವೆ. (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಬೀದರ್, ಚಿತ್ರದುರ್ಗ, ದಕ್ಷಿಣ ಕನ್ನಡ, ಮೈಸೂರು, ಉಡುಪಿ, ಹಾಸನ, ವಿಜಯಪುರ, ರಾಯಚೂರು, ಚಿಕ್ಕಮಗಳೂರು, ಬಳ್ಳಾರಿ, ಹಾವೇರಿ, ಚಾಮರಾಜನಗರ, ಗದಗ)

3) ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ:-

ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು ಶಸ್ತ್ರ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ, ಸಂಜಯಗಾಂಧಿ ಆಸ್ಪತ್ರೆಗಳಲ್ಲಿ ಹಾಗೂ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಅಂಗವಿಕಲತೆ ನಿವಾರಣಾ ಶಸ್ತ್ರ ಚಿಕಿತ್ಸೆಗಾಗಿ ರೂ.1.00 ಲಕ್ಷಗಳವರೆಗೆ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ.

4) ಸಾಧನೆ ಮತ್ತು ಪ್ರತಿಭೆ ಯೋಜನೆ:

ವಿಕಲಚೇತನ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು "ಸಾಧನೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ರೂ.50,000/-ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ "ಪ್ರತಿಭೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ವೈಯಕ್ತಿಕ ಸಾಂಸ್ಕೃತಿಕ ರೂ.2,000/-ಗಳು ಹಾಗೂ ಸಮೂಹ ಕಾರ್ಯಕ್ರಮಕ್ಕೆ ರೂ.10,000/-ಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

5) ನಿರಾಮಯ ಆರೋಗ್ಯ ವಿಮಾ ಯೋಜನೆ :

ಬುದ್ಧಿಮಾಂದ್ಯ, ಸೆರೆಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆ ಹೊಂದಿರುವ ಪ್ರತಿ ವ್ಯಕ್ತಿ ಹಾಗೂ ಮಗುವಿಗೆ ವರ್ಷಕ್ಕೆ ಒಂದು ಬಾರಿ ಪ್ರೀಮಿಯಂ ಮೊತ್ತ ರೂ.250/-ಗಳನ್ನು ಭಾರತ ಸರ್ಕಾರದಿಂದ ಗುರುತಿಸಲ್ಪಟ್ಟ ಅಧಿಕೃತ ಸಂಸ್ಥೆಯಾದ ಅಂಗವಿಕಲರ ಪುನಶ್ಚೇತನ ಸಂಸ್ಥೆ (ರಿ) (ಎ.ಪಿ.ಡಿ) ಬೆಂಗಳೂರು ರವರಿಗೆ ಪಾವತಿಸಲಾಗುವುದು. ಪ್ರತಿ ವರ್ಷ ಯೋಜನೆಯಡಿ ಬರುವ ಫಲಾನುಭವಿಗಳು ರೂ.1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ. ಈ ಮೊತ್ತದಲ್ಲಿ ರೂ.60,000/-ಗಳವರೆಗೆ ಸರ್ಜರಿ ವೆಚ್ಚ ಉಳಿದ ರೂ.40,000/- ಗಳಲ್ಲಿ ವೈದ್ಯಕೀಯ ಖರ್ಚು ಥೆರಪಿ, ಪ್ರಯಾಣ ವೆಚ್ಚಗಳನ್ನು ಒಳಗೊಂಡಿರುತ್ತದೆ.

6) ಸ್ಪರ್ಧಾ ಚೇತನ:-

ಈ ಯೋಜನೆಯಡಿ ವಿಶೇಷ ಸಾಮರ್ಥ್ಯ/ಭಿನ್ನ ಸಾಮರ್ಥ್ಯದ ವಿದ್ಯಾವಂತ ವ್ಯಕ್ತಿಗೆಗಳಿಗೆ ಐ.ಎ.ಎಸ್./ಕೆ.ಎ.ಎಸ್. ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪೂರ್ವ ಪರೀಕ್ಷಾ ತರಬೇತಿ ಕೇಂದ್ರಗಳು ಹಾಗೂ ಈ ಇಲಾಖೆಯಿಂದ ಗುರುತಿಸಲ್ಪಟ್ಟ ತರಬೇತಿ ಕೇಂದ್ರಗಳ ಮೂಲಕ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

7) ನಿರುದ್ಯೋಗ ಭತ್ಯೆ:- ಎಸ್.ಎಸ್.ಎಲ್.ಸಿ ಹಾಗೂ ನಂತರ ವ್ಯಾಸಂಗ ಮಾಡಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ರೂ.1000/-ಗಳ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ.

(ಇ) ಸಾರ್ವಜನಿಕ ಅರಿವು ಮೂಡಿಸುವ ಯೋಜನೆಗಳು:

1. ವಿಕಲಚೇತನರ ಮಾಹಿತಿ ಸಲಹಾ ಕೇಂದ್ರ :

ಅಂಗವಿಕಲರಿಗೆ ಲಭ್ಯವಿರುವ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಹಾಗೂ ವಿಶೇಷ ಶಾಲೆಗಳು ಹಾಗೂ ವೃತ್ತಿ ತರಬೇತಿ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ನಿರ್ದೇಶನಾಲಯದಲ್ಲಿ ಹಾಗೂ ರಾಜ್ಯದ 30 ಜಿಲ್ಲೆಗಳಲ್ಲಿ ವಿಕಲಚೇತನರ ಸಹಾಯವಾಣಿ / ಮಾಹಿತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.ಈ ಕೇಂದ್ರಗಳಲ್ಲಿ ಒಳ್ಳೆಯ ಗುಣ ಮಟ್ಟದ ಕೃತಕಾಂಗಗಳು ದೊರೆಯುವ ಮಾಹಿತಿ ಹಾಗೂ ಅಂಗವಿಕಲರಿಗೆ ಬೇಕಾಗಿರುವ ಮಾಹಿತಿಗಳನ್ನು ಮತ್ತು ಇದರ ಜೊತೆಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸಾರ್ವಜನಿಕ ಉದ್ಯಮ ಹಾಗೂ ಖಾಸಗಿ ಉದ್ಯಮಗಳಲ್ಲಿ ಅಂಗವಿಕಲರಿಗೆ ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಲಾಗುವುದು.

2) ವಿಕಲಚೇತನರಿಗೆ ಗುರುತಿನ ಚೀಟಿ ನೀಡುವ ಯೋಜನೆ:-

ಈ ಯೋಜನೆಯಡಿಯಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ.ಈ ಗುರುತಿನ ಚೀಟಿಯನ್ನು ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸಿಕೊಳ್ಳಬಹುದಾಗಿದೆ. ವಿಕಲಚೇತನರಿಗೆ ವಿಶಿಷ್ಟ ಗುರುತಿನ ಚೀಟಿ (UNIQUE DISABILITY ID)ನೀಡುವ ಯೋಜನೆಯು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದೆ. ರಾಜ್ಯ ಸರ್ಕಾರದಿಂದ ನೇಮಿಸಲಾಗುವ ವೈದ್ಯಕೀಯ ಪ್ರಾಧಿಕಾರಗಳಿಂದ ದೃಢೀಕರಿಸಲಾಗುವ ವೈದ್ಯಕೀಯ ಪ್ರಮಾಣ ಪತ್ರದ ಸಮಗ್ರ ಮಾಹಿತಿಯುಳ್ಳ ಗಣಕೀಕೃತ ಗುರುತಿನ ಚೀಟಿಯನ್ನು ವಿಕಲಚೇತನ ವ್ಯಕ್ತಿಗಳಿಗೆ ನೀಡುವ ವ್ಯವಸ್ಥೆಯಾಗಿದ್ದು, ಇದರಲ್ಲಿ ವಿಕಲಚೇತನ ವ್ಯಕ್ತಿಯ ವಿವರಗಳು ಹಾಗೂ ಅವರಲ್ಲಿರುವ ವಿಕಲತೆಯ ವಿವರ ಮತ್ತು ಪ್ರಮಾಣವನ್ನು ನಮೂದಿಸಲಾಗಿರುತ್ತದೆ.

3).ವಿಕಲಚೇತನರಿಗೆ ರಿಯಾಯಿತಿ ದರದ ಬಸ್ ಪಾಸ್:

ಈ ಯೋಜನೆಯಡಿ ವಿಕಲಚೇತನರಿಗೆ 100 ಕಿ.ಮೀ. ವ್ಯಾಪ್ತಿಯೊಳಗೆ ಸಂಚರಿಸಲು ವಾರ್ಷಿಕ ರೂ.660/- ರಿಯಾಯಿತಿ ದರದಲ್ಲಿ ಬಸ್ ಪಾಸ್‌ಗಳನ್ನು ಕೆ.ಎಸ್.ಆರ್.ಟಿ.ಸಿ ಹಾಗೂ ಬಿ.ಎಂ.ಟಿ.ಸಿ ವತಿಯಿಂದ ವಿತರಿಸಲಾಗುತ್ತಿದೆ ಪೂರ್ಣ ಅಂಧರು ಉಚಿತವಾಗಿ ರಾಜ್ಯದಲ್ಲಿ ಸಂಚರಿಸಲು ಅವಕಾಶವಿರುತ್ತದೆ.

***

DistrictWise PHP Active Pensioner Report				
Sl.NO	dm_district_ename	PHP_1	PHP_2	PHP Total
1	Bagalkot	14633	17108	31741
2	Ballari	18507	24296	42803
3	Bangalore Rural	5561	5506	11067
4	Belagavi	32138	52126	84264
5	Bengaluru	13660	31444	45104
6	Bidar	16242	17733	33975
7	Chamarajanagar	9934	11202	21136
8	Chikballapur	8511	14479	22990
9	Chikkamagaluru	6319	9493	15812
10	Chitradurga	13268	21432	34700
11	Dakshina Kannada	8791	8879	17670
12	Davanagere	9839	15532	25371
13	Dharwad	13731	20250	33981
14	Gadag	10770	11139	21909
15	Hassan	13761	11092	24853
16	Haveri	17247	20407	37654
17	Kalaburagi	18177	16873	35050
18	Kodagu	1724	3183	4907
19	Kolar	6568	16255	22823
20	Koppal	11819	16139	27958
21	Mandya	18139	15670	33809
22	Mysuru	13541	18330	31871
23	Raichur	10253	18154	28407
24	Ramanagara	8497	9190	17687
25	Shivamogga	7647	12429	20076
26	Tumakuru	19625	22355	41980
27	Udupi	5958	6044	12002
28	Uttara Kannada	8482	6904	15386
29	Vijayapura	15996	12872	28868
30	Yadgir	5858	14110	19968
Total		**365196**	**480626**	**845822**

ಕರ್ನಾಟಕ ಸರ್ಕಾರ

ಸಂ:ಟಿಡಿ 36 ಟಿಡಿಕ್ಯೂ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:17-03-2021.

8
U/S
10/3/21

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ, ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭಾ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1588 ಕ್ಕೆ ಉತ್ತರ ನೀಡುವ ಬಗ್ಗೆ.
ಉಲ್ಲೇಖ: ಪ್ರಶಾವಿಸ/15ನೇವಿಸ/9ಮುಉ/ಪ್ರಸಂ.1588/2021.ದಿನಾಂಕ: 02-03-2021.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಖಂಡ ಶ್ರೀನಿವಾಸ ಮೂರ್ತಿ .ಆರ್ (ಪುಲಿಕೇಶಿ ನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1588 ಕ್ಕೆ ಸಂಬಂಧಿಸಿದ ಉತ್ತರದ ಕನ್ನಡ ಭಾಷೆಯ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

17/03/2021

(ರಂಗಪ್ಪ ಕರಿಗಾರ)
ಶಾಖಾಧಿಕಾರಿ, ಸಾರಿಗೆ-2,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1588

ಸದಸ್ಯರ ಹೆಸರು : ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್. (ಪುಲಕೇಶಿ ನಗರ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10-03-2021

ಕ್ರ ಸಂ.	ಪ್ರಶ್ನೆ	ಉತ್ತರ
ಅ	ಆಟೋ ಮತ್ತು ಟ್ಯಾಕ್ಸಿ ಚಾಲಕರುಗಳ ಅನುಕೂಲಕ್ಕಾಗಿ ಕಲ್ಯಾಣ ಮಂಡಳಿಯನ್ನು ರಚಿಸುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಇದೆಯೇ;	ಕಾರ್ಮಿಕ ಇಲಾಖೆಯಿಂದ ಆಟೋ ಟ್ಯಾಕ್ಸಿ ಹಾಗೂ ಖಾಸಗಿ ವಾಣಿಜ್ಯ ಸಾರಿಗೆ ಚಾಲಕರು, ನಿರ್ವಾಹಕರು, ಕ್ಲೀನರ್‌ಗಳು, ಮೆಕ್ಯಾನಿಕ್ಸ್, ಆಟೋ ಮೊಬೈಲ್ ವರ್ಕರ್ಸ್, ಪಂಚರ್ ಶಾಪ್ ವರ್ಕರ್ಸ್, ಸ್ಟೇಷನ್ ಸಿಬ್ಬಂದಿಗಳು, ಬುಕಿಂಗ್ ಕ್ಲರ್ಕ್ ಹಾಗೂ ಇತರೆ ಸಂಬಂಧಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಸದುದ್ದೇಶದಿಂದ, "ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಮತ್ತು ಇತರೆ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಸುಂಕ ವಿಧೇಯಕ-2020" ರ ಕರಡನ್ನು ರೂಪಿಸಲಾಗಿದ್ದು, ಸರ್ಕಾರದ ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿರುತ್ತದೆ.
ಆ	ಇದ್ದಲ್ಲಿ, ಸದರಿ ಕಲ್ಯಾಣ ಮಂಡಳಿಯನ್ನು ಅಸಂಘಟಿತ ಚಾಲಕರ ವರ್ಗದವರ ಶ್ರೇಯೋಭಿವೃದ್ಧಿಗಾಗಿ ಹಾಗೂ ಆರ್ಥಿಕವಾಗಿ ಸದೃಢರಾಗಲು, 2021-2022ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ, ಅನುದಾನವನ್ನು ಕಾಯ್ದಿರಿಸಲಾಗುವುದೇ; (ಮಾಹಿತಿಯನ್ನು ನೀಡುವುದು)	ಸದರಿ ವಿಧೇಯಕದಲ್ಲಿ ಕಲ್ಯಾಣ ಸೆಸ್ ಅನ್ನು ಸಂಗ್ರಹಿಸುವುದು ಹಾಗೂ ನಿಧಿ ಸ್ಥಾಪಿಸುವ ಪ್ರಾವಧಾನಗಳನ್ನು ರೂಪಿಸಲಾಗಿದ್ದು, ಸದರಿ ನಿಧಿಯ ಮೂಲಕ ಸಂಗ್ರಹವಾದ ಮೊತ್ತವನ್ನು ಬಳಸಿಕೊಂಡು ಫಲಾನುಭವಿಗಳಿಗೆ ಯೋಜನೆ / ಸೌಲಭ್ಯಗಳನ್ನು ರೂಪಿಸಿ ಜಾರಿಗೊಳಿಸಲು ಉದ್ದೇಶಿಸಲಾಗಿದೆ.
ಇ)	ಕರ್ನಾಟಕ ಗೃಹ ಮಂಡಳಿ ಹಾಗೂ ಬಿ.ಡಿ.ಎ. ವತಿಯಿಂದ "ಸರ್ವರಿಗೂ ಸೂರು" ಎಂಬ ಸರ್ಕಾರದ ಧ್ಯೇಯವನ್ನು ಮತ್ತು "ಸಾರಥಿ ಸೂರು" ಎಂಬ ಸರ್ಕಾರದ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆಯೇ;	"ಸರ್ವರಿಗೂ ಸೂರು" ಎಂಬ ಸರ್ಕಾರದ ಧ್ಯೇಯವನ್ನು ರಾಜೀವ್ ಗಾಂಧಿ ವಸತಿ ನಿಗಮದಿಂದ ಕೇಂದ್ರ ಪುರಸ್ಕೃತ ಸರ್ವರಿಗೂ ಸೂರು - ಪ್ರಧಾನ ಮಂತ್ರಿ ಅವಾಸ್ ಯೋಜನೆ (ನಗರ) ಯನ್ನು ಕಾರ್ಯಗತಗೊಳಿಸಲಾಗುತ್ತಿದೆ. ಬಿ.ಡಿ.ಎ. ವತಿಯಿಂದ ಈ ಬಗ್ಗೆ ಯೋಜನೆ ಕೈಗೆತ್ತಿಕೊಂಡಿರುವುದಿಲ್ಲ.
ಈ)	ಸದರಿ ಯೋಜನೆಯಲ್ಲಿ ಎಷ್ಟು ಜನರಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ? (ವಿವರ ನೀಡುವುದು)	ವಸತಿ ಇಲಾಖೆಯಿಂದ "ಸರ್ವರಿಗೂ ಸೂರು" (ಹೌಸಿಂಗ್ ಫಾರ್ ಆಲ್) ಯೋಜನೆಯಡಿ ಇವರಿಗೆ 579918 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲು ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಟಿಡಿ 36 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಅನುಬಂಧ - 2 (4)

RAJIV GANDHI HOUSING CORPORATION (RGHCL), Kaveri Bhavan Bangalore

Annexuere for LAQ No 1588

SL.No	Name of the Dist	SC	ST	Gen	OBC/Min	Total
1	Bagalkot Total	6579	1307	6887	3365	18138
2	Ballari Total	14627	12334	11679	6595	45235
3	BBMP Total	61	1	4	68	134
4	Belagavi Total	13590	2477	17431	6876	40374
5	Bengaluru Rural Total	2954	472	1110	523	5059
6	Bengaluru Urban Total	44705	11190	59315	14652	129862
7	Bidar Total	6721	1890	10907	4311	23829
8	Chamarajanagar Total	2340	1341	1183	532	5396
9	Chikkaballapura Total	1963	582	1534	1560	5639
10	Chikkamagaluru Total	2146	193	1895	781	5015
11	Chitradurga Total	5180	3145	5677	2900	16902
12	DakshinaKannada Total	927	296	3025	1852	6100
13	Davanagere Total	2890	922	3216	4069	11097
14	Dharwad Total	5060	1293	7074	5480	18907
15	Gadag Total	6435	1782	13068	3459	24744
16	Hassan Total	3957	57	3070	1668	8752
17	Haveri Total	2633	1034	5925	2026	11618
18	Kalaburagi Total	14937	511	9010	5087	29545
19	Kodagu Total	403	34	288	93	818
20	Kolar Total	4146	209	1188	1368	6911
21	Koppal Total	3444	1107	4764	2626	11941
22	Mandya Total	1362	89	1402	773	3626
23	Mysuru Total	12405	3718	10701	5247	32071
24	Raichur Total	5715	2508	5699	2558	16480
25	Ramanagara Total	4283	848	5729	4315	15175
26	Shivamogga Total	4907	1264	8821	3284	18276
27	Tumakuru Total	4230	1226	3483	3402	12341
28	Udupi Total	430	152	1404	369	2355
29	UttaraKannada Total	3871	673	4200	2838	11582
30	Vijayapura Total	13951	1441	11710	3856	30958
31	Yadgiri Total	2519	2107	2756	3656	11038
	Grand Total	**199371**	**56203**	**224155**	**100189**	**579918**

N.S. [signature]

ಎನ್.ಎಸ್. ಮಹದೇವ ಪ್ರಸಾದ್
ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಆಯುಕ್ತರವರ ಕಛೇರಿ, ಗ್ರಾ.ಕುನೀ.&.ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ,
ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009. ☎:080-22240508 📠:22240509
ಇ-ಮೇಲ್: krwssd@gmail.com

ಸಂ:ಗ್ರಾಕುನೀ&ನೈಇ 61 ಗ್ರಾನೀಸ(4)2021 ದಿನಾಂಕ:17.03.2021.

13
U/S
10/3/21

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು-01.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ **ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ) ಇವರ ಚುಕ್ಕೆ ರಹಿತ ಪ್ರಶ್ನೆ ಸಂ:1420ಕ್ಕೆ** ಸಂಬಂಧಿಸಿದ ಮೇಲಿನ ಕ್ರಮ / ವಾಸ್ತವಿಕ ವರದಿಯ ಉತ್ತರ ನೀಡುವ ಬಗ್ಗೆ.

******

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ **ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ) ಇವರ ಚುಕ್ಕೆ ರಹಿತ ಪ್ರಶ್ನೆ ಸಂ:1420ಕ್ಕೆ** ಸಂಬಂಧಿಸಿದ ಉತ್ತರದ **25** ಪ್ರತಿಗಳನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಕೆ.ಪಿ. [signature] 17-03-2021
ಪತ್ರಾಂಕಿತ ವ್ಯವಸ್ಥಾಪಕರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

ಪ್ರತಿಯನ್ನು:
1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿರವರಿಗೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರಿಗೆ.

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ ಕೋಟೆ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1420

ಉತ್ತರ ದಿನಾಂಕ : 10.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ರೂಪಿಸುವಂತೆ ಕಳೆದ 2 ವರ್ಷಗಳಲ್ಲಿ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಅನುಮೋದನೆ ನೀಡಿದ ಹಾಗೂ ನೀಡದೇ ಇರುವ ಪ್ರಸ್ತಾವನೆಗಳ ಅನುದಾನ ಸಹಿತ ಸಂಪೂರ್ಣ ವಿವರವನ್ನು ನೀಡುವುದು;	ಕಳೆದ 2 ವರ್ಷಗಳಲ್ಲಿ ಸರ್ಕಾರಕ್ಕೆ 116 ಬಹುಗ್ರಾಮ ಕುಡಿಯುವ ನೀರಿನ ಯೋಜನೆ ರೂಪಿಸುವಂತೆ ಒಟ್ಟು ರೂ.63094.29ಕೋಟಿಗಳಿಗೆ ಪ್ರಸ್ತಾವನೆ ಸಲ್ಲಿಕೆಯಾಗಿರುತ್ತದೆ. ಈ ಪೈಕಿ ಎಸ್.ಎಲ್.ಎಸ್.ಎಸ್.ಸಿ ಸಭೆಯಲ್ಲಿ 25 ಯೋಜನೆಗಳ ಪ್ರಸ್ತಾವನೆಗಳಿಗೆ ರೂ.13945.07ಕೋಟಿಗಳಿಗೆ ಅನುಮೋದನೆ ನೀಡಲಾಗಿದ್ದು, 91 ಯೋಜನೆಗಳಿಗೆ ರೂ.49149.22ಕೋಟಿಗಳಿಗೆ ಅನುಮೋದನೆ ನೀಡಿರುವುದಿಲ್ಲ.
ಆ)	ಅನುಮೋದನೆ ನೀಡದಿರಲು ಕಾರಣಗಳೇನು; ಯಾವಾಗ ಅನುಮೋದನೆ ನೀಡಲಾಗುವುದು;(ವಿವರ ನೀಡುವುದು)	ಅನುದಾನದ ಲಭ್ಯತೆಗೆ ಅನುಸಾರ ಹಂತ ಹಂತವಾಗಿ ಈ ಯೋಜನೆಯನ್ನು ಕೈಗೆತ್ತಿಕೊಂಡು ಆಡಳಿತಾತ್ಮಕ ಅನುಮೋದನೆ ಪಡೆದು, ಬಹುಗ್ರಾಮ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.
ಇ)	ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ಹಾಗೂ ಸರಗೂರು ತಾಲ್ಲೂಕಿನ ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ;	ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ಹಾಗೂ ಸರಗೂರು ತಾಲ್ಲೂಕಿನ ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆ.
ಈ)	ಹಾಗಿದ್ದಲ್ಲಿ, ಪ್ರಸ್ತಾವನೆಗಳು ಯಾವ ಹಂತದಲ್ಲಿವೆ; ಯಾವಾಗ ಸದರಿ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿ ಅನುದಾನ ಬಿಡುಗಡೆಗೊಳಿಸಲಾಗುವುದು? (ಪ್ರಸ್ತಾವನೆವಾರು ವಿವರ ನೀಡುವುದು)	ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆಯಲ್ಲಿ ತಾಲ್ಲೂಕಿನಲ್ಲಿ 85ಎಲ್‌ಪಿಸಿಡಿಗೆ ವಿನ್ಯಾಸಿಸಲಾದ ಈ ಕೆಳಕಂಡ ಬಹುಗ್ರಾಮ ಕುಡಿಯುವ ನೀರಿನ ಸರಬರಾಜು ಯೋಜನೆಗಳು ರಾಜ್ಯ ಮಟ್ಟದ ಯೋಜನಾ ಮಂಜೂರಾತಿ (ಎಸ್.ಎಲ್.ಎಸ್.ಎಸ್.ಸಿ) ಸಭೆಯಲ್ಲಿ ಅನುಮೋದನೆಯಾಗಿರುತ್ತದೆ. 1) ಮನುಗನಹಳ್ಳಿ ಮತ್ತು 38 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆಯ ರೂ.19.47ಕೋಟಿ ಪ್ರಾಥಮಿಕ ಯೋಜನಾ ವರದಿ–ದಿ:28.07.2016ರ ಎಸ್.ಎಲ್.ಎಸ್.ಎಸ್.ಸಿ ಸಭೆ 2) ಹಂಪಾಪುರ ಮತ್ತು ಇತರೆ 52 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆಯ ರೂ.24.09ಕೋಟಿ ವಿಸ್ತೃತ ವರದಿ ಮತ್ತು 3) ಹಿರೇಹಳ್ಳಿ ಮತ್ತು ಇತರೆ 23 ಗ್ರಾಮಗಳ ರೂ.16.94ಕೋಟಿ ವಿಸ್ತೃತ ಯೋಜನೆಗೆ–ದಿ:01.02.2017ರ ಎಸ್.ಎಲ್.ಎಸ್.ಎಸ್.ಸಿ ಸಭೆ ರಾಜ್ಯದಲ್ಲಿ ಪ್ರಗತಿಯಲ್ಲಿರುವ ಬಹಳಷ್ಟು ಬಹುಗ್ರಾಮ ಕುಡಿಯುವ ನೀರಿನ ಕಾಮಗಾರಿಗಳು ಪೂರ್ಣಗೊಂಡ ನಂತರ ಮತ್ತು ಅವುಗಳ ಸರಿಯಾದ ನಿರ್ವಹಣೆಗೆ ಸಮಸ್ಯೆಯಾಗಬಾರದೆಂದು ಆರ್ಥಿಕ ಇಲಾಖೆಯು ಸೂಚಿಸಿದೆ. ಜಲಧಾರೆ ಯೋಜನೆಯಡಿ ಸಮಗ್ರವಾದ ಯೋಜನೆಯನ್ನು ರೂಪಿಸಿ ಆರ್ಥಿಕ ಇಲಾಖೆಗೆ ಸಲ್ಲಿಸಲು ಸೂಚಿಸಿದ್ದರ ಮೇರೆಗೆ ದಿ:05.09.2018ರಂದು ನಡೆದ ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಭೆಯಲ್ಲಿ ಹೊಸ ಯೋಜನೆಗಳನ್ನು ಸಂಯೋಜಿಸಿ, ಜಲಧಾರೆ ಯೋಜನೆಯಡಿ ಸಮಗ್ರವಾದ ಯೋಜನೆಯನ್ನು ರೂಪಿಸಲು ತೀರ್ಮಾನಿಸಲಾಗಿತ್ತು. ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆಯಲ್ಲಿ ತಾಲ್ಲೂಕಿನಲ್ಲಿ 85ಎಲ್‌ಪಿಸಿಡಿಗೆ ವಿನ್ಯಾಸಿಸಲಾದ ಈ ಕೆಳಕಂಡ ಬಹುಗ್ರಾಮ ಕುಡಿಯುವ ನೀರಿನ ಸರಬರಾಜು ಯೋಜನೆಗಳನ್ನು ರೂಪಿಸಲಾಗಿತ್ತು.

		1) ಹೆಚ್.ಡಿ.ಕೋಟೆ ತಾಲ್ಲೂಕಿನ 131 (Left side of river) ಜನವಸತಿಗಳು ಮತ್ತು ಹುಣಸೂರು 162 (Left side of river) ಜನವಸತಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿ–ರೂ.257.00ಕೋಟಿ, 2) ಹೆಚ್.ಡಿ.ಕೋಟೆ ತಾಲ್ಲೂಕಿನ 53 (Right side of river) ಜನವಸತಿಗಳು, ನಂಜನಗೂಡು ತಾಲ್ಲೂಕಿನ 03 (Right side of river) ಜನವಸತಿಗಳು ಮತ್ತು ಮೈಸೂರು ತಾಲ್ಲೂಕಿನ 114(Right side of river) ಜನವಸತಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗೆ ರೂ.187.00.00ಕೋಟಿ 3) ಹೆಚ್.ಡಿ.ಕೋಟೆ ತಾಲ್ಲೂಕಿನ ಮನುಗನಹಳ್ಳಿ ಮತ್ತು ಇತರೆ 61 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗೆ ರೂ.11.23ಕೋಟಿ ಜಲ ಜೀವನ್ ಮಿಷನ್ ಯೋಜನೆಯಡಿ ಕಾರ್ಯಾತ್ಮಕ ನಳ ನೀರು ಸಂಪರ್ಕ ನೀಡಲು ಉದ್ದೇಶಿಸಿದ್ದು, ಈ ಯೋಜನೆಯಡಿ ಹೊಸ ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ 55LPCDಯಂತೆ ಕಾರ್ಯಾತ್ಮಕ ನಳ ನೀರು ಸಂಪರ್ಕ ನೀಡಲು 2021–22 ಮತ್ತು 2022–23ನೇ ಕ್ರಿಯಾಯೋಜನೆಯನ್ನು ಸೃಜಿಸಲಾಗಿದ್ದು, ಎಸ್.ಎಲ್.ಎಸ್.ಎಸ್.ಸಿ ಸಭೆಯಲ್ಲಿ ಅನುಮೋದನೆಯಾದ ನಂತರ ಅನುದಾನ ಲಭ್ಯತೆಗನುಗುಣವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮಕೈಗೊಳ್ಳಲಾಗುವುದು. ಪ್ರಸ್ತಾವನೆವಾರು ವಿವರವನ್ನು **ಅನುಬಂಧ–1**ರಲ್ಲಿ ಲಗತ್ತಿಸಿದೆ.

ಸಂ:ಗ್ರಾಕುನೀ&ನೈಇ 61 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

Annexure-1

Sl no	Division	Name of Scheme	Source	Taluks covered	Vidhana sabha constituency covered	Population details			House hold details			Bulk water cost (Rs in lakhs) including 5 years O&M	FHTC cost (Rs in Lakhs)	Total Cost (Rs in lakhs)
						General	SC	ST	General	SC	ST			
1	2	3		4	5	6	7	8	9	10	11	12	13	14
1	Mysuru	Providing Water supply Facility to 131 Habitations of (Left side of river) H.D.Kote Taluk&162 Habitations of (Left side of) Hunusur Taluk in Mysore District	Kabini River	HDKote/Hunsur	HDKote/Hunsur	90242	60162	50135	18048	12032	100027	25700.00	6016.00	31716.00
